ಅವರು ಇಲ್ಲಿ ಬಂದು ತಮ್ಮ ಉದ್ಯೋಗದಲ್ಲಿ ತೊಡಗಿದರು. ಅವರ ಅನೇಕ ಸ್ನೇಹಿತರು ದೊಡ್ಡ ನಗರವಾದ ಸಿಡ್ನಿಯಲ್ಲಿ ನೆಲೆಸಿದ್ದರು. ಆದರೆ ರವಿಶಂಕರ್ ಬುದ್ಧಿವಂತರು. ಹಳ್ಳಿಯಲ್ಲಿ ನಗರದಲ್ಲಿನ ಪೈಪೋಟಿಯಿಲ್ಲ. ಅಲ್ಲಿದ್ದದ್ದು ಮೂರ್ನಾಲ್ಕು ಮಂದಿ ವೈದ್ಯರುಗಳು ಮಾತ್ರ. ಸಂಪಾದನೆ ಬಹಳ. ಅಲ್ಲದೆ ಸಿಡ್ನಿಯಲ್ಲಿ ಬಹಳ ಡ್ರೈವ್ ಮಾಡಬೇಕಾಗುತ್ತದೆ. ಇಲ್ಲಾದರೆ ಐದು ಕಿಲೋಮೀಟರ್ ಡ್ರೈವ್ ಮಾಡಿದರೆ ಸಾಕು, ಊರಿನಾಚೆ ಇರುತ್ತೇವೆ. ಬಹು ಜನಪ್ರಿಯ ವೈದ್ಯರಾದರು ಅವರು. ಹಳ್ಳಿಯಲ್ಲಿ ಅವರನ್ನು ಬಲ್ಲದವರು ಇಲ್ಲವೇಇಲ್ಲ ಎನ್ನುವಂತಾಯಿತು.

ಮಕ್ಕಳಿಬ್ಬರು. ಅನಿತಾ ಮತ್ತು ಅವಳ ತಮ್ಮ ಅನಿಲ್. ಈಗ ಅನಿಲ್ ಸಿಡ್ನಿಯಲ್ಲಿದ್ದು ಕಾಲೇಜ್ ವ್ಯಾಸಂಗ ಮಾಡುತ್ತಿದ್ದಾನೆ. ವ್ಯವಹಾರ ಚತುರರು ರವಿಶಂಕರ್. ಮಕ್ಕಳು ಶಾಲೆಗೆ ಹೋಗುತ್ತಿದ್ದಾಗ ನಾಲ್ಕು ಬೆಡ್‌ರೂಮಿನ ಮನೆಯನ್ನು ಕೊಂಡರು. ಈಗ ಮಕ್ಕಳು ಮನೆಯಲ್ಲಿಲ್ಲ. ಅದನ್ನು ಬಾಡಿಗೆಗೆ ಕೊಟ್ಟು ಎರಡು ಬೆಡ್ ರೂಮಿನ ಮನೆಯನ್ನು ಕೊಂಡರು. ಆದರೆ ಅವರಿಗೆ ಸಿಡ್ನಿಯಲ್ಲಿ ನಾಲ್ಕು ಬಾಡಿಗೆ ಮನೆಗಳು ಬೇರೆ. ಆ ಮಾತು ಬೇರೆ.

ಗುರುವಾರ, ರವಿಶಂಕರ್ ಕೆಲಸ ಮಾಡುವ ದಿವಸ. ಶನಿವಾರ ಅಥವಾ ಭಾನುವಾರವಾಗಿದ್ದರೆ ತಾವೇ ಸಿಡ್ನಿಗೆ ಹೋಗಿ ಮಗಳನ್ನು ಎದುರುಗೊಳ್ಳುತ್ತಿದ್ದರು. ಇಂದು ದವಾಖಾನೆಯನ್ನು ಮುಚ್ಚುವಂತಿಲ್ಲ, ಬರುವ ರೋಗಿಗಳಿಗೆ ಅನನುಕೂಲವಾಗುತ್ತದೆ.

★★★

ಮನೆಗೆ ಯಾರಾದರೂ ಬರುತ್ತಾರೆ ಎಂದೊಡನೆ ಪದ್ಮಾ ಮನೆಯಲ್ಲಿ ತುರ್ತು ಪರಿಸ್ಥಿತಿಯನ್ನು ಘೋಷಿಸುತ್ತಿದ್ದರು. ಅವರು ಬರುವ ವೇಳೆಗೆ ಮನೆ ಟಿಪ್ ಟಾಪ್ ಆಗಿರಬೇಕು. ಒಂದು ವಾರದಿಂದಲೇ ಕಾರ್ಯಾರಂಭವಾಯಿತು. ತವಕ ಬೇರೆ – ಮಗಳು ಬರುತ್ತಾಳೆ. ಜೊತೆಗೆ ಅವಳ ಸ್ನೇಹಿತ ಕೂಡ. ಪ್ರತಿ ಗಂಟೆಗೆ ಒಂದು ಸಲ ಎಂಬಂತೆ ಗಂಡನನ್ನು ತರಾಟೆಗೆ ತೆಗೆದುಕೊಂಡರು. “ಈ ಕೊಂಪೆಯಲ್ಲಿ ನಮ್ಮನ್ನು ತಂದು ಹಾಕಿದ್ದೀರಿ. ಏನಿದೆ ಈ ಹಳ್ಳಿಯಲ್ಲಿ? ಅದು ಹೋಗಲಿ ಎಂದರೆ ಚಿಕ್ಕ ಮನೆ ಬೇರೆ. ಎರಡೇ ಬೆಡ್‌ರೂಮು, ನಮ್ಮ ಮನೆಯಲ್ಲಿ ಇರೋ ಕಸ ಎಲ್ಲಾ ಅಲ್ಲೇ ತುಂಬಿಕೊಂಡಿದೆ. ಈ ಭಾಗ್ಯಕ್ಕೆ ಇಲ್ಲಿಗೆ ಮಗಳು, ಅವಳ ಫ್ರೆಂಡ್ ಬೇರೆ ಬರ್ತಾ ಇದಾರೆ.” ಇಂತಹ ಮಾತುಗಳನ್ನು ಕೇಳಿಸಿಕೊಳ್ಳುವುದನ್ನು ರವಿಶಂಕರ್ ಎಂದೋ ಬಿಟ್ಟುಬಿಟ್ಟಿದ್ದರು. ಒಮ್ಮೊಮ್ಮೆ “ಅನಿತಾಳ ಮದುವೆ ಆಗಲಿ. ಆಗ ಈ ಊರನ್ನು ಬಿಟ್ಟು ಸಿಡ್ನಿಗೆ ಹೋಗೋಣ. ಅಲ್ಲಿ ದೊಡ್ಡ ಮನೆಯನ್ನು ಕೊಂಡರಾಯಿತು” ಎನ್ನುತ್ತಿದ್ದರು.

ಹಣ ತೆತ್ತು ಸಹಾಯಕರನ್ನು ಕರೆಸಿ ಮನೆಯ ಪ್ರತಿಯೊಂದು ಕೊಠಡಿಯನ್ನೂ, ಯಾವುದೇ ಮೂಲೆಯನ್ನೂ ಬಿಡದಂತೆ, ಗುಡಿಸಿ ಒರೆಸಿ ತೊಳೆಸಿದರು. ಮನೆಯ ಪ್ರತಿ ಕಿಟಕಿಯ ಗಾಜುಗಳನ್ನೂ ಒರೆಸಿ ಶುದ್ಧಿ ಮಾಡಲಾಯಿತು. ಮನೆಯ ಮುಂದಿದ್ದ ತೋಟ ಹೊಸ ರೂಪ ತಾಳಿತು. ಹಾಸಿಗೆಗಳಿಗೆ ಹೊಸ ಬೆಡ್ ಶೀಟುಗಳನ್ನು ಕೊಂಡುತರಲಾಯಿತು, ಮತ್ತೆ ಹನ್ನೆರಡು ಟವಲುಗಳು ಮನೆಗೆ ಬಂದವು. ಎಲ್ಲೆಲ್ಲಿಯೂ ಘಮಘಮಿಸುವ ಸೆಂಟುಗಳು. ಮಗಳಿಗೆ ಒಂದು ಹೊಸ ಸೀರೆ, ಶರ್ಟುಗಳನ್ನು ತೆಗೆದಿಟ್ಟರು. ಆಲ್ಬರ್ಟನಿಗೆ ತಾವು ಲಂಡನ್ನಿಗೆ ಹೋದಾಗ ತಾವು ತಂದ ಶರ್ಟ್ ತೆಗೆದಿಟ್ಟರು. ರವಿಶಂಕರ್ ಮಗಳು ಬಂದಾಗ ಯಾವ ಬಟ್ಟೆಯನ್ನು ತೊಡಬೇಕು ಎಂಬುದನ್ನು ನಿಗದಿ ಪಡಿಸಲಾಯಿತು. ಅವರು ಹೇಳಿದರು, “ಅಲ್ಲಾ ಕಣೇ, ಮನೆಗೆ ಬರ್ತಾ ಇರೋದು ನಿನ್ನ ಮಗಳು ಅನಿತಾ, ಎಲಿಜಬೆತ್ ರಾಣಿ ಅಲ್ಲ. ಸ್ವಲ್ಪ ಭೂಮಿಗೆ ಇಳಿದು ಬಾ.”

ರವಿಶಂಕರ್ ಅವರಿಗೆ ಚನ್ನಾಗಿ ಗೊತ್ತು, ಮಾತನಾಡಿ ಪ್ರಯೋಜನವಿಲ್ಲ ಎಂಬುದು. ಅದೂ ಅಲ್ಲದೆ ಅವರು ಹಗಲಿನ ಹೊತ್ತು ತಮ್ಮ ದವಾಖಾನೆಗೆ ಹೋಗುತ್ತಿದ್ದರು. ನಿಶ್ಚಿಂತೆ.